INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,82- 92
Peer -Reviewed, Refereed Journal

# ತಿರುಮಕೂಡಲು ನರಸೀಪುರ ತಾಲ್ಲೂಕಿನ ಶಾಸನ ಕವಿಗಳು, ಲಿಪಿಕಾರರು ಮತ್ತು ಶಿಲ್ಪಿಗಳು

ಅರುಣ್‌ಕುಮಾರ್ ಕೆ.ಎಸ್.[1]

ರಾಜ್ಯದ ಬಹುಪಾಲು ತಾಲ್ಲೂಕುಗಳಂತೆ ಇದೂ ಕೂಡ ಕೇಂದ್ರದ ಹೆಸರಿನಿಂದಲೇ ಕರೆಯಲ್ಪಡುತ್ತಿದೆ. ದಕ್ಷಿಣಕಾಶಿ, ವಾರಾಣಾಸಿ, ದಕ್ಷಿಣ ಪ್ರಯಾಗ. ರುದ್ರಪಾದ ಭೂಮಿ ಎಂದೆಲ್ಲಾ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ನರಸೀಪುರವು, ಕಾವೇರಿ–ಕಪಿಲಾ ನದಿಗಳ ಸಂಗಮ ಸ್ಥಳದಲ್ಲಿರುವುದರಿಂದ "ತಿರುಮಕೂಡಲು" (ತಮಿಳಿನಲ್ಲಿ ತಿರು ಎಂದರೆ ಶ್ರೀ ಎಂದರ್ಥ) ಎಂಬ ಹೆಸರು ಬಳಕೆಗೆ ಬಂದು ಸುಮಾರು 11–12 ನೇ ಶತಮಾನದಿಂದೀಚೆಗೆ ಶಾಸನಗಳಲ್ಲಿ ಉಲ್ಲೇಖಿತಗೊಂಡಿದೆ.

ತಿರುಮಕೂಡಲು ನರಸೀಪುರವು ಮೈಸೂರು ಜಿಲ್ಲೆಯ ಒಂದು ಪ್ರಮುಖ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಹತ್ವದ ಪ್ರದೇಶವೆಂದು ಹೇಳಬಹುದು. ಕಾರಣ ತಿರುಮಕೂಡಲು ನರಸೀಪುರ ವಲಯವು ಶಿಲಾಯುಗದಿಂದ ಇಂದಿನವರೆಗೆ ಮಾನವನ ಹೆಜ್ಜೆಯ ಗುರುತುಗಳನ್ನು ತೋರಿಸಿಕೊಡುವ ಅಪೂರ್ವ ಸಂಪತ್ತನ್ನು ಹೊಂದಿದೆ. ಆದಿ ಮಾನವ, ಸಭ್ಯ ನಾಗರಿಕ ಹಾಗೂ ಸಮಾಜ ಜೀವಿಯಾಗುವವರೆಗೆ ಇರುವ ವಿಕಾಸದ ವಿವಿಧ ಹಂತಗಳನ್ನು ಕಂಡುಕೊಳ್ಳಲು ತಿರುಮಕೂಡಲು ನರಸೀಪುರದ ಇತಿಹಾಸ ಹಾಗೂ ಪುರಾತತ್ವ ಸಹಕಾರಿಯಾಗಿದೆ. ಈ ಚಾರಿತ್ರಿಕ ನೆಲೆಯಲ್ಲಿ ನರಸೀಪುರ ಹೆಮ್ಮಿಗೆ, ಮತ್ತಲವಾಡಿ ಹಾಗೂ ತಲಕಾಡುಗಳಲ್ಲಿ ಪತ್ತೆಯಾಗಿರುವ ಇತಿಹಾಸ ಪೂರ್ವಕಾಲಕ್ಕೆ ಸಂಬಂಧಿಸಿದ ಮಾನವ ವಸತಿನೆಲೆಗಳು ಮಹತ್ವದ ಉತ್ಖನನಗಳು ನಡೆದು ಮಹತ್ವದ ಚಾರಿತ್ರಿಕ ಅಂಶಗಳು ಬೆಳಕು ಕಂಡಿವೆ.

ರಾಜ್ಯದಲ್ಲಿ ಅತ್ಯಂತ ಹೆಚ್ಚು ಶಾಸನಗಳನ್ನು ಹೊಂದಿರುವ ಕೆಲವೇ ತಾಲೂಕುಗಳಲ್ಲಿ ನರಸೀಪುರ ಒಂದಾಗಿದ್ದು, ತಲಕಾಡಿನ ಗಂಗರು, ತಂಜಾವೂರಿನ ಚೋಳರು, ದ್ವಾರಸಮುದ್ರ ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು, ಹೈದರ್–ಟಿಪ್ಪು, ಸ್ಥಳೀಯ ಸಾಮಂತರಾದ ಮೂಗೂರು, ಕಳಲೆ ಹಾಗೂ ಉಮ್ಮತ್ತೂರು ಪ್ರಭುಗಳು, ಕಮೀಷನರುಗಳು ಹಾಗೂ ದಿವಾನರುಗಳ ಆಡಳಿತ ಅವಧಿಗೆ ಸೇರಿದ 325 ಶಾಸನಗಳು ವರದಿಯಾಗಿವೆ.

---

1.ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಾಸನ ಎಂಬ ಪದವು ಶಾಸ್ತ್ರ ಧಾತುವಿನಿಂದ ನಿಷ್ಪನ್ನವಾಗಿದೆ ಎಂಬ ಶಬ್ದಕ್ಕೆ ಹಾಗೆ ಮಾಡು ಶಿಕ್ಷಿಸು ನಿಯಂತ್ರಿಸು ಮುಂತಾದ ಅರ್ಥಗಳಿವೆ. ಪ್ರಾಚೀನ ಭಾರತದ ರಾಜಕೀಯ ಗಂಥಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ ಮುಂತಾದ ಗ್ರಂಥಗಳು ಶಾಸನ ಎಂಬ ಪದವನ್ನು ರಾಜಾಜ್ಞೆ ಎಂಬ ಅರ್ಥದಲ್ಲಿ ವಿವರಿಸಿವೆ. ಪ್ರಾಚೀನ ಕಾಲದಲ್ಲಿ ಉಪಯೋಗಿಸಿದ್ದ ಲೇಖನ ಸಾಮಾಗ್ರಿಗಳೆಂದರೆ ಮಣ್ಣು, ಕಲ್ಲು, ಕಬ್ಬಿಣ, ಚಿನ್ನ, ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ, ದಂತ, ಸ್ಫಟಿಕ, ಚರ್ಮ, ಮರ, ಮೂಳೆ, ಭೂರ್ಜಪತ್ರ, ತಾಳೆಗರಿ, ಕಡತ, ಕಾಗದ ಮುಂತಾದವು ಪ್ರಮುಖವಾದವು. ಕಾಲನಂತರದಲ್ಲಿ ಶಾಸನಗಳನ್ನು ಸಾಮಾನ್ಯವಾಗಿ ಕಲ್ಲಿನ ಮೇಲೆ ಅಥವಾ ಲೋಹದ ಮೇಲೆ ಬರೆಯುವ ರೂಢಿ ಅಧಿಕವಾಯಿತು. ಈಜಿಪ್ಟ್ ಮುಂತಾದ ದೇಶಗಳಲ್ಲಿ ಕ್ರಿಸ್ತ ಪೂರ್ವ 2000 ಕ್ಕಿಂತ ಹಿಂದಿನ ಶಾಸನಗಳು ಸಿಕ್ಕಿವೆ. ಈ ಚಿತ್ರ ಲಿಪಿ ಶಾಸನಗಳನ್ನು ಓದಿದ್ದೆ. ಆಧುನಿಕ ಐತಿಹಾಸಿಕ ಸಂಶೋಧನೆಯ ಸಾಹಸಗಳಲ್ಲೊಂದು ಈಗ ಮಧ್ಯಪ್ರಾಚ್ಯ ಎಂದು ಕರೆಸಿಕೊಳ್ಳುತ್ತಿರುವ ಪ್ರದೇಶವೇ ಬಹುಶಃ ಮನುಷ್ಯನ ಅಮೂಲ್ಯ ಆಸ್ತಿಗಳಲ್ಲಿ ಒಂದಾದ ಲಿಪಿಯ ತಾಯ್ಮನೆ.

ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದವು. ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು. ರಾಜನೇ ಆಗಲಿ ಅಥವಾ ಬೇರೆಯವರು ಯಾರೇ ಆಗಲಿ ದಾನವನ್ನು ಕೊಟ್ಟಾಗ, ಆ ದಾನದ ವಿಷಯದಲ್ಲಿ ಕೆಲವು ನಿಯಮಗಳನ್ನು ಹಾಕಿ ನಿಯಮಗಳನ್ನು ಯಾರು ಉಲ್ಲಂಘಿಸಬಾರದೆಂದು, ಎಲ್ಲರೂ ಆ ದಾನವನ್ನು ಕಾಪಾಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತಿದ್ದರು ಅಥವಾ ಆಜ್ಞೆ ಮಾಡುತ್ತಿದ್ದರು. ಅಲ್ಲದೆ ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಗಳನ್ನು ತೆಗೆದು ಹಾಕಿದ ಆಜ್ಞೆಯನ್ನೋ ರಾಜನೋ ಅವನ ಅಧಿಕಾರಿಗಳೋ ಹೊರಡಿಸುತ್ತಿದ್ದರು. ಹೀಗೆ ಪರ್ಯಾಯವಾಗಿ ಇಂತಹ ಇತರ ಬರಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಿತು. ಈ ಅರ್ಥವನ್ನು ಇನ್ನೂ ವಿಸ್ತಾರವಾಗಿ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು, ಸನ್ಯಾಸಿಗಳ ಮರಣವನ್ನು, ಕೊನೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಹೇಳುವ ಬರಹಗಳಿಗೂ ಶಾಸನಗಳು ಎಂಬ ಹೆಸರು ಅನ್ವಯವಾಯಿತು.

ಯಾವುದೇ ಒಂದು ಪ್ರದೇಶದ ಅಥವಾ ಯಾವುದೇ ಒಂದು ಕಾಲದ ಇತಿಹಾಸ, ಸಂಸ್ಕೃತಿ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಬಹುಮುಖ್ಯ ಆಕರಗಳೆಂದರೆ ಶಾಸನಗಳೆಂದು ಹೇಳಬಹುದು. ಕಾವ್ಯಗಳಿಂದಲೂ ಸ್ವಲ್ಪ ಪ್ರಮಾಣದ ಮಾಹಿತಿ ದೊರೆತರೂ ಕಾವ್ಯಗಳಲ್ಲಿ ಕಲ್ಪನೆ ಹಾಗೂ ಉತ್ಪ್ರೇಕ್ಷೆಗಳ ಪ್ರಮಾಣ ಹೆಚ್ಚಾಗಿರುತ್ತದೆ. ಶಾಸನಗಳಲ್ಲಾದರೆ ಅತ್ಯಂತ ನಿಖರವಾದ ಮಾಹಿತಿ ದೊರಕುತ್ತದೆ. ಆದ್ದರಿಂದ ಸಾಂಸ್ಕೃತಿಕ, ಅಧ್ಯಯನ ದೃಷ್ಟಿಯಿಂದ ಶಾಸನ ಅತ್ಯಂತ ಹೆಚ್ಚಿನ ಮಹತ್ವವನ್ನು ಹೊಂದಿದೆ.

**ಶಾಸನ ಕವಿಗಳು**

ಶಾಸನಗಳ ರಚನೆಯಲ್ಲಿ ಮಹತ್ವದ ಪಾತ್ರವಹಿಸುವವರು ಶಾಸನ ಕವಿಗಳು, ಇವರುಗಳನ್ನು ಕೃತಿಕಾರರೆಂದು ಸಹ ಕರೆಯಲಾಗುತ್ತದೆ. ಪ್ರಖ್ಯಾತ ಅರಸರ ಆಸ್ಥಾನಗಳಲ್ಲಿದ್ದ ಕೆಲವು ಕವಿಗಳು ಶಾಸನ ರಚನೆಯಲ್ಲಿ ಸಿದ್ಧಹಸ್ತರಾಗಿದ್ದರು. ಅಂದಿನ ಕಾಲದಲ್ಲಿ ಇವರ ಪ್ರತಿಭೆಗೆ ತಕ್ಕ ಮಾನ್ಯತೆಯೂ ದೊರೆಯುತ್ತಿದ್ದು, ಭೂಮಿ, ಸ್ವರ್ಣ ಮತ್ತು ವರಹಗಳ ರೂಪದಲ್ಲಿ ಇವರಿಗೆ ಪುರಸ್ಕಾರಗಳು ಲಭ್ಯವಾಗುತ್ತಿದ್ದವು. ಮಹಾಕವಿ ರನ್ನ ಜನರಂಥ ಕವಿ ಚಕ್ರವರ್ತಿಗಳೂ ಸಹ ಶಾಸನ ರಚಿಸುವುದನ್ನು ಗಮನಿಸಬಹುದು. ಲಕ್ಕುಂಡಿಯ ಅತ್ತಿಮಬ್ಬೆಯ ಶಾಸನವನ್ನು ಕವಿಚಕ್ರವರ್ತಿ ರನ್ನನೇ ರಚಿಸಿದ್ದಾನೆ ಎಂದು ಗುರುತಿಸಲಾಗಿದೆ. ವಿಷಾದದ ಸಂಗತಿಯೆಂದರೆ ಶಾಸನ ರಚನೆಯಲ್ಲಿ ಮುಖ್ಯ ಪಾತ್ರವಹಿಸುವ ಶಾಸನಕವಿಗಳು ಬಹುಪಾಲು ಶಾಸನಗಳಲ್ಲಿ ತಮ್ಮ ಹೆಸರನ್ನು ದಾಖಲಿಸದೇ ಅಜ್ಞಾತವಾಗಿಯೇ ಉಳಿದಿರುವುದು, ಇನ್ನೂ ಬಹಳಷ್ಟು ಶಾಸನಗಳು ತ್ರುಟಿತವಾಗಿರುವುದರಿಂದ ಶಾಸನದಲ್ಲಿ ಸಮಗ್ರ ವಿಷಯಗಳು ತಿಳಿದುಬರದೇ ಶಾಸನ ಕವಿಗಳ ಹೆಸರುಗಳು ಅಳಿಸಿಹೋಗಿರುವ ಸಾಧ್ಯತೆಗಳಿಂದಲೂ ಇವರುಗಳ ಅಜ್ಞಾತರಾಗಿಯೇ ಉಳಿದಿದ್ದಾರೆ. ತಿರುಮಕೂಡಲು ನರಸೀಪುರ ತಾಲೂಕಿನ ಶಾಸನದಲ್ಲಿ ಉಕ್ತವಾಗಿರುವ ಶಾಸನಕವಿಗಳನ್ನು ಮುಂದಿನಂತೆ ಗುರುತಿಸಬಹುದು.

**ವಿದ್ವಾನ್ ಕೃಷ್ಣದೀಕ್ಷಿತರು**

ಕ್ರಿಶ.1749ರ ಶಾಸನವೊಂದು ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ (ಕ್ರಿ.ಶ. 1734–1766] ಕಾಲದಲ್ಲಿ ರಚಿತವಾದ ನಾಗರಿಲಿಪಿ ಕನ್ನಡ ಮತ್ತು ಸಂಸ್ಕೃತ ಭಾಷೆಯ 1387 ಸಾಲುಗಳಿಂದ ಸುದೀರ್ಘವಾದ ಶಾಸನವಾಗಿದೆ.[1] ಈ ಕಾಲಘಟ್ಟದಲ್ಲಿ ನರಸೀಪುರದ ಶಾಸನದಲ್ಲಿ ಕಳಲೆ ವಂಶಸ್ಥರು ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿದ್ದ ಸರ್ವಾಧಿಕಾರಿ ನಂಜರಾಜ ಮತ್ತು ದಂಡನಾಯಕರು ದಳಪತಿ ದೇವರಾಜ್ ವಂಶಾವಳಿಯ ಮಾಹಿತಿ ನೀಡಲಾಗಿದೆ

ದಳಪತಿ ದೇವರಾಜನು ರಾಮಚಂದ್ರಾಪುರವೆಂಬ 14 ಹಳ್ಳಿಗಳಿಂದ ಕೂಡಿದ ಅಗ್ರಹಾರವನ್ನು 120 ವೃತ್ತಿಗಳಾಗಿ ವಿಂಗಡಿಸಿ ಬ್ರಾಹ್ಮಣರಿಗೆ ದಾನ ನೀಡುವ ವಿಷಯವನ್ನು ಶಾಸನ ದಾಖಲಿಸಿದೆ. ಇದಲ್ಲದೆ ಗ್ರಾಮದ ವ್ಯಾಪ್ತಿಯನ್ನು ತಿಳಿಸುವಾಗ ಹಲವಾರು ಅಗ್ರಹಾರಗಳು, ಮಠಗಳು, ಬ್ರಾಹ್ಮಣರುಗಳ ಮಾಹಿತಿ ನೀಡಿದ್ದಾರೆ. ಹಾಗೂ ಹಲವು ಸಾಹಿತ್ಯಕ ಅಂಶಗಳನ್ನು ಕೂಡ ಒಳಗೊಂಡ ಮಹತ್ವದ ಅಂಶಗಳಿಂದ ಕೂಡಿದ ಶಾಸನವನ್ನು ದಳವಾಯಿ ದೇವರಾಜರ ಅನುಮತಿಯಲ್ಲಿ ಕೃಷ್ಣಾಚಾರ್ಯರ

ಮಗನಾದ ವಿದ್ವಾನ್ ಕೃಷ್ಣದೀಕ್ಷಿತರು ರಚಿಸಿದ್ದಾರೆ. ಇದಕ್ಕಾಗಿ ಅವನು ಭೂ ಕೊಡುಗೆಗಳಿಂದ ಸನ್ಮಾನಿತನಾಗಿರುವ ವಿಷಯವು ಸಹ ಶಾಸನದಿಂದ ತಿಳಿದುಬರುತ್ತದೆ.

**ತ್ರಯಂಬಕ**

ಮೂರು ತಾಮ್ರ ಫಲಕಗಳಲ್ಲಿ ನಾಗರಿ ಲಿಪಿಯ ಸಂಸ್ಕೃತಿ ಮತ್ತು ಕನ್ನಡ ಭಾಷೆಯಲ್ಲಿ ರಚನೆಯಾಗಿರುವ ದಾನ ಶಾಸನವೊಂದು ಕ್ರಿ.ಶ.1397ರಲ್ಲಿ ತಿರುಮಕೂಡಲು ನರಸೀಪುರದ ವಿಜಯನಗರದ ಸಂಗಮ ವಂಶದ ಅರಸ ಎರಡನೇ ಹರಿಹರನ ಆಳ್ವಿಕೆಯ (ಕ್ರಿಶ. 1377–1404) ಕಾಲದಲ್ಲಿ ಯದುವಂಶದ ಸಂಗಮರಿಂದ ಆರಂಭಿಸಿ ಅವರ ಮಗ ಬುಕ್ಕರಾಯ (ಕ್ರಿಶ. 1356–1377) ಇವರ ಎರಡನೇ ಹರಿಹರನವರೆಗಿನ ವಂಶಾವಳಿಯನ್ನು ಈ ಶಾಸನದಲ್ಲಿ ನೀಡಿದ್ದಾರೆ.[2]

ಎರಡನೇ ಹರಿಹರನ ಸಹೋದರ ಮಲ್ಲಿನಾಥ ಅಥವಾ ಮಲ್ಲಪ್ಪೊಡೆಯ ಮಹಾಮಂಡಲೇಶ್ವರನಾಗಿದ್ದಾಗ ಇವರ ಮಗ ನಾರಾಯಣ ದೇವ ಹೊಡೆಯರು (ನಾರಾಯಣ ಒಡೆಯರು) ರಾಜರಾದ ಪ್ರತಾಪ ಹರಿಹರಮಹಾರಾಯನಿಗೆ ಒಳಿತಾಗಲೆಂದು. ಪ್ರತಾಪ ಹರಿಹರಪುರ ಎಂಬ ಅಗ್ರಹಾರವನ್ನು ನಿರ್ಮಿಸಿ 36 ವೃತ್ತಿಗಳಾಗಿ ವಿಭಜಿಸಿ, ನಾನಾಗೋತ್ರದ ಸೂತ್ರದ 39 ಬ್ರಾಹ್ಮಣರಿಗೆ ಹಂಚಿಕೆ ಮಾಡಿದ ವಿಷಯ ದಾಖಲಿಸಿದೆ. ಈ ಶಾಸನದ ಕೊನೆಯಲ್ಲಿ ಶಾಸನ ರಚಿಸಿದ ತ್ರಯಂಬಕ ಸಹಿಯನ್ನು ಒಳಗೊಂಡಿದೆ. ಹೀಗೆ ಶಾಸನಕಾರರು ಶಾಸನದ ಕೊನೆಯಲ್ಲಿ ತಮ್ಮ ಹೆಸರನ್ನು ಬರೆದುಕೊಳ್ಳುವುದನ್ನು ಸಾಮಾನ್ಯವಾಗಿ ಗಮನಿಸಬಹುದು.

**ನಾಗದೇವ**

ಶಾಸನಕಾರ ಹೆಗ್ಗಡೆ ಬೊಮ್ಮದೇವನ ಅಳಿಯ ನಾಗದೇವನು ರಚಿಸಿದ ಕ್ರಿಶ. 1180 ತುಂಬಲ ಗ್ರಾಮದ ಶಾಸನದಲ್ಲಿ ಹೊಯ್ಸಳರ ವಂಶಸ್ಥಾಪಕನಾದ ಸಳನಿಂದ ಆರಂಭಗೊಂಡು ಎರಡನೇ ವೀರಬಲ್ಲಾಳನ ಆಳ್ವಿಕೆಯವರೆಗೆ ವಂಶಾವಳಿಯನ್ನು ಹಾಗೂ ಎರಡನೇ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ತುಂಬಲ ಗ್ರಾಮದೊಂದಿಗೆ ಅದಕ್ಕೆ ಹೊಂದಿಕೊಂಡ ಮೂರು ಸಣ್ಣ ಹಳ್ಳಿಗಳನ್ನು ತಿರುಮಕೂಡಲಿನ ಅಗಸ್ತೇಶ್ವರ ದೇವರ ಅಂಗಭೋಗಕ್ಕೆ ದತ್ತಿಯಾಗಿ ನೀಡಿದ ವಿವರವನ್ನು ದಾಖಲಿಸಿದೆ.[3] ಹೊಯ್ಸಳ ವಂಶದ ಉಗಮ ಮತ್ತು ಉತ್ಕರ್ಷವನ್ನು ಕಂದ ಪದ್ಯದಲ್ಲಿ ವರ್ಣಿಸಿದೆ. ಸಳನೆಂಬ ಜಿನಮುನಿಯ ಹೊಯ್ ಸಳೆಯಿಂದಂ ತಳೆದಿತ್ತ ಯಾದವವಂಶಂ!! ಆ ಯದುಕುಳದೊಳ್ ಸಕಳಮಹೀಯುವತೀಕಾಂತನೆನಿಪ ವಿನೆಯಾದಿತ್ಯಾಂ ಶ್ರೀಯಂ ಪಾಳಿಪನಾದನುಪಾಯಜ್ಞಂ ತತ್ತನೂಜನೆರೆಯಂಗನೃಪಂ!! ತದಪತ್ಯರ್ಬ್ಬಲ್ಲಾಳಂ ವಿದಿತಗುಣಂ ವಿಷ್ಣುಧೂಪನು ದಯಾದಿತ್ಯಂ

ಮದನಾರರಿಮಹಿಮರರೊಳು ಹೃದಯಪ್ರಿಯ ನಖಿಳಧರೆಗೆ ವಿಷ್ಣುನೃಪಾಳಂ!! ಆತನ ಮಹಿಮೆಯಂ ಪೇಳ್ವೆಡೆ! ಜಯತಿಧರಣಿ ಲೋಕೋತ್ತಂಶಿತಾತ್ಮೀಯ ಪಾದಶ್ಚತುರ ವಿಭುಧಗೋಷ್ಠೀ ಪ್ರೌಢವಾಣೀ ವಿನೋದ ಸಕಳ ಭರತವಿದ್ಯಾ ಹೃದ್ಯಗಂಭೀರ ಭಾವೋ ವಿಪುಳ ವಿಜಯಲಕ್ಷ್ಮೀವಲ್ಲಭೋ ವಿಷ್ಣುದೇವ!! ಎಂದು ಉಕ್ತವಾಗಿದೆ

**ವಚ್ಚಂಡೈ**

ತುಂಬಲಾ ಗ್ರಾಮದಲ್ಲಿ ದೊರೆತಿರುವ ಮತ್ತೊಂದು ಶಾಸನ ಕೂಡ ಎರಡನೇ ವೀರ ಬಲ್ಲಾಳನ ಆಳ್ವಿಕೆಯ ಕಾಲದ್ದಾಗಿದ್ದು, ಶಾಸನದ ವಿಷಯವು ಮೇಲ್ಕಂಡ ವಿವರಗಳನ್ನೇ ಹೋಲುತ್ತದೆ. ಶಾಸನದ ಭಾಷೆ ಕನ್ನಡವಾಗಿದ್ದರೂ ತಮಿಳು ಮತ್ತು ಅರವ ಲಿಪಿಯಲ್ಲಿ ಕಂಡರಿಸಲಾಗಿದೆ. ಈ ಶಿಲಾಶಾಸನವನ್ನು ದೇವಾಲಯದ ಸ್ಥಾನಪತಿಗಳೂ ಶಾಸನ ರಚನೆಯಲ್ಲಿ ನೈಪುಣ್ಯವನ್ನು ಹೊಂದಿರುತ್ತಿದ್ದರು ಎಂಬುದಕ್ಕೆ ಸೂಕ್ತ ಉದಾಹರಣೆಯಾಗಿದೆ. ಸ್ಥಾನಪತಿ ಆಗುತ್ತಿಯಾಂಡಾರನ ಮಗ ವಚ್ಚಂಡೈರವರು. ತಂದೆಯ ಶಾಸನ ರಚನೆಯ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದನ್ನು ಪ್ರಸ್ತುತ ಶಾಸನದಿಂದ ತಿಳಿಯಬಹುದು.[4]

**ಕಂಬ ಕುಮಾರ**

ಕ್ರಿಸ್ತಶಕ ಎಂಟನೇ ಶತಮಾನದಲ್ಲಿ ಶ್ರೀಪುರುಷರು ಆಡಳಿತದ ಕಾಲಾವಧಿಗೆ ಸರಿಹೊಂದುತ್ತದೆ. ಮುತ್ತರಸರಿಗೆ ನೀಡಿದ ಕೊಡುಗೆಯ ಬಗ್ಗೆ ಉಲ್ಲೇಖಿಸಲಾಗಿದೆ. ಯಾವ ಉಡುಗೊರೆ (ಕೊಡುಗೆ) ಎಂಬುದು ಶಾಸನ ತ್ರುಟಿತವಾಗಿರುವುದರಿಂದ ತಿಳಿಯುವುದಿಲ್ಲ. ಆದರೆ ಕೊನೆಯಲ್ಲಿ ಕಂಬಕುಮಾರನು ರಚಿಸಿದ್ದರೆಂದು ತಿಳಿದುಬರುತ್ತದೆ ಕ್ರಿಶ. 1231 ಹಿರಿಯೂರು ಗ್ರಾಮದ ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಶಿಲಾಶಾಸನವನ್ನು ಕಂಡಿರಿಸಿದ ಶಿಲ್ಪಿ ವುಯಿಯೋಜನ ಮಗ ಕಂಬನೆಂಬುವವನಿದ್ದನು. ಇವನು ಶಿಲ್ಪಿಯಾಗಿದ್ದರೂ ಕಂಬ ಕುಮಾರನಿಗಿಂತ 400 ವರ್ಷದ ಹಿಂದಿನ ಶಾಸನ ಇದಾಗಿದೆ.[5]

**ಅಡೈಪಾರು**

ಕ್ರಿ.ಶ.1279 ರ ಕಾಲದಲ್ಲಿ ವೀರಸಿಂಹದೇವನ ಆಳ್ವಿಕೆಯ ಕಾಲದಲ್ಲಿ ಅತ್ತಿಪಳ್ಳಿಯ ಅಪ್ಪಯ್ಯನ ಮಕ್ಕಳಾದ ಕುಂಬಡೈ ಮತ್ತು ಶಂಗಡೈರವರು ರಂಗನಾಥ ದೇವಾಲಯಕ್ಕೆ ನೀಡಿದ ಭೂಮಿಯ ವಿಷಯವನ್ನು ಕವಿಯಾದ ಅಡೈಪಾರು ಎಂಬುವರು ರಚಿಸಿದ್ದಾರೆ.[6]

**ಸಭಾಪತಿ**

ಕ್ರಿ.ಶ. 1571ರಲ್ಲಿ ಸೋಸಲೆ ಗ್ರಾಮದಲ್ಲಿ ದೊರೆತಿರುವ ತಾಮ್ರಶಾಸನವಾಗಿದ್ದು, ನಾಗರಿಲಿಪಿಯ ಸಂಸ್ಕೃತದ ಶಾಸನವಾಗಿದೆ. ವಿಜಯನಗರದ ಅರಸರ ಕೃಷ್ಣದೇವರಾಯನು ಚಿಕ್ಕದೇವರಾಜನ ಹಳ್ಳಿಯನ್ನು ಕೃಷ್ಣರಾಯಪುರ ಎಂದು ಮರು ನಾಮಕರಣ ಮಾಡಿ ವ್ಯಾಸತೀರ್ಥರು (ಬ್ರಾಹ್ಮಣ ತೀರ್ಥರ ಶಿಷ್ಯರು) ದಾನವಾಗಿ ನೀಡಿರುವ ವಿವರ ದಾಖಲಿಸಿದೆ. ಸಭಾಪತಿಯು ಶಾಸನದ ರಚನಾಕಾರರಾದರೆ, ಕೊರೆದವರು ಮಲ್ಲಣ್ಣನ ಮಗನಾದ ವೀರಣಾರ್ಯನೆಂದು ಉಲ್ಲೇಖಿಸಲಾಗಿದೆ. ಅವನ ತಂದೆಯ ಹೆಸರು ಕುಂಭಕೋಣದ ಕುಂಬ ಲಿಂಗ ಎಂದು ಕ್ರಿ.ಶ. 1580ರ ನಂಜನಗೂಡಿನ ಶಾಸನದಿಂದ ತಿಳಿಯುವ ಸಾಧ್ಯತೆ ಇದೆ. ಮುಂದಿನ ಮತ್ತೊಂದು ಸೋಸಲೆ ಶಾಸನದಲ್ಲಿ ಸಭಾಪತಿಯನ್ನು ಕೃಷ್ಣದೇವಮಹಾರಾಯ ಶಾಸನೇನ ಸಭಾಪತಿ ಎಂದು ಉಲ್ಲೇಖಿಸಲಾಗಿದೆ.[7]

**ರಾಯಸದ ಓಬಣ್ಣ**

ಕ್ರಿ.ಶ.1662ರ ಸೋಸಲೆಯ ತಾಮ್ರಶಾಸನದಲ್ಲಿ ಅರವೀಡು ವಂಶಸ್ಥರಾದ ಶ್ರೀರಂಗರಾಯನು ವೇಲಾಪುರಿಯಿಂದ ಆಳ್ವಿಕೆ ನಡೆಸುತ್ತಿದ್ದು, ಯಲವಂಕ ಸೆಟ್ಟಿಹಳ್ಳಿ ಗ್ರಾಮವನ್ನು ವ್ಯಾಸರಾಯ ಮಠದ ರಾಮಚಂದ್ರ ತೀರ್ಥರ ಶಿಷ್ಯರಾದ ಲಕ್ಷ್ಮೀವಲ್ಲಭತೀರ್ಥ ಇವರ ಶಿಷ್ಯರಾದ ಲಕ್ಷ್ಮೀನಾಥ ತೀರ್ಥ ಶ್ರೀಪಾದರಿಗೆ ದಾನವನ್ನು ನೀಡಿದ ವಿಷಯ ಈ ಶಾಸನದಲ್ಲಿ ಉಕ್ತವಾಗಿದೆ. ಈ ಶಾಸನದ ರಚನಾಕಾರ ರಾಯಸದ ಓಬಣ್ಣ.[8]

**ರಾಯಸಂ ಬಾಲಯ್ಯ**

ಕ್ರಿ.ಶ.1708 ರ ಸೋಸಲೆ ಗ್ರಾಮದ ದಾನಶಾಸನ ರಚನಾಕಾರರ ರಾಯಸಂ ಬಾಲಯ್ಯ ಎಂದು ದಾಖಲಿಸಿದೆ. ಈ ಶಾಸನವು ತೆಲುಗು ಭಾಷೆ ಮತ್ತು ಲಿಪಿಯ ತಾಮ್ರಶಾಸನ. ಮಧುರ ವಂಶದ ವಿಜಯರಂಗ ಚೊಕ್ಕನಾಥಯ್ಯರು ಮಗಾಮ ಪ್ರಾಂತ್ಯದ ತೆರಿಗೆಯ ಆದಾಯವನ್ನು ವ್ಯಾಸರಾಯ ಮಠದ ರಘುನಾಥತೀರ್ಥರಿಗೆ ಗೋಪಾಲಕೃಷ್ಣ ದೇವರ ಸೇವೆಗಾಗಿ ಹಾಗೂ ಚೊಕ್ಕನಾಥ ಪುರದ ಖರ್ಚು ವೆಚ್ಚಕ್ಕಾಗಿ ನೀಡಿದ ವಿಷಯ ದಾಖಲಾಗಿದೆ.[9]

**ಕನಕರಾಯ**

ಕ್ರಿ.ಶ. 1712 ರ ಸೋಸಲೆ ಶಾಸನವೂ ವ್ಯಾಸರಾಯನ ಮಠದ 7 ನೇ ತಾಮ್ರಶಾಸನದಲ್ಲಿ ದೊರೆತು ತೆಲುಗು ಭಾಷೆಯ ಶಾಸನವಾಗಿದೆ. ನಗಾರಿಯನ್ನು ಕೊಳ್ಳಲು ವ್ಯಾಸರಾಯರು ಮಠಕ್ಕೆ ನೀಡಿದ ದತ್ತಿಯನ್ನು

ಕುರಿತು ವಿವರಿಸುವ ಶಾಸನವಾಗಿದ್ದು, ಕೊನೆಯಲ್ಲಿ ಕನಕರಾಯನ ತಮಿಳು ಲಿಪಿಯ ಸಹಿಯನ್ನು ಕಾಣಬಹುದು.[10]

**ರಾಯಸಂ ಧರ್ಮರಾಯ**

ಕ್ರಿಸ್ತಶಕ 1713 ರ ಸೋಸಲೆ ತಾಮ್ರಶಾಸನ ತಮಿಳು ಲಿಪಿ ಮತ್ತು ಭಾಷೆಯಲ್ಲಿ ರಚನೆಗೊಂಡಿದೆ. ವ್ಯಾಸರಾಯರ ಮಠದ ವಂಶಾವಳಿಯನ್ನು ಒಳಗೊಂಡಿದ್ದು ಗೋಪಾಲಕೃಷ್ಣ ಸ್ವಾಮಿಯ ಪೂಜೆಗಾಗಿ ಲಕ್ಷ್ಮೀನಿಧಿ ತೀರ್ಥ ಶ್ರೀಪಾದರ ಮಠಕ್ಕೆ ರಾಮನಾಡಿನ ಅಧಿಪತಿಯಾಗಿ ರಘುನಾಥಸೇತುಪತಿ ಕಾತ ದೇವನ ಮಗ ವಿಜಯರಘುನಾಥಸೇತುಪತಿ ಕಾತ್ತ ದೇವನು ದಾನ ನೀಡಿದುದರ ಉಲ್ಲೇಖವನ್ನು ನೋಡಬಹುದು.[11] ಲಿಂಗರಾಯರ ಸಹಿಯೊಂದಿಗೆ ಚೊಕ್ಕಪಿಳ್ಳೆಯ ಮಗ ರಾಯಸಂ ಧರ್ಮರಾಯನು ಶಾಸನದ ರಚನಕಾರನೆಂದು ಉಲ್ಲೇಖ ದೊರೆಯುತ್ತದೆ.

**ಮಲ್ಲಪ್ಪ**

ಕ್ರಿ.ಶ.1231ರಲ್ಲಿ ತಿರುಮಕೂಡಲು ನರಸೀಪುರ ತಾಲೂಕಿನ ಹಿರಿಯೂರು ಗ್ರಾಮದಲ್ಲಿ ಶಿಲಾಶಾಸನವು ಹೊಯ್ಸಳ ದೊರೆ ಮೂರನೇ ವೀರಬಲ್ಲಾಳ ಆಳ್ವಿಕೆಯ ಕಾಲದಲ್ಲಿ, ರಾಯಪ್ಪನು ತೊರೆನಾಡನ್ನು ಆಳುತ್ತಿದ್ದಾಗ ಕೆಲವು ಗೌಡರು ಮದಯಪುರ ಭೂಮಿಯನ್ನು ಮೂರು ಜನರಿಗೆ ಮೂರುವರ್ಷಗಳಿಗೆ ಭೋಗ್ಯಕ್ಕೆ ಮಾಡಿಕೊಂಡ ವಿವರವೂ ಶಾಸನದಲ್ಲಿ ಉಕ್ತಗೊಂಡಿದೆ.[12] ಈ ಶಾಸನದ ರಚನೆಯನ್ನು ಸೇನಬೋವ ಕೇಶದೇವನ ಮಗ ಮಲ್ಲಪ್ಪ ಮತ್ತು ಕಂಡಿರಿಸಿದ ಶಿಲ್ಪಿ ವುಯಿಯೋಜನ ಮಗ ಕಂಬ. ಸೇನಾಬೋವರು ಶಾಸನ ರಚನೆಯಲ್ಲಿ ಸಿದ್ಧಹಸ್ತರಾಗಿದ್ದು ಇದು ಅವರ ಕರ್ತವ್ಯಗಳಲ್ಲಿ ಒಂದಾಗಿತ್ತು ಎಂದು ಡಾ. ಎಂ. ಚಿದಾನಂದಮೂರ್ತಿಯವರು ಗುರುತಿಸಿದ್ದಾರೆ. ಕೆಲವು ವೃತ್ತಿಗಳು ವಂಶಪಾರಂಪರ್ಯವಾಗಿ ಮುಂದುವರಿಯುವುದನ್ನು ಸೇನಾಬೋವಾ ಕೇಶದೇವನ ಮಗನಾದ ಮಲ್ಲಪ್ಪನು ಈ ಶಾಸನವನ್ನು ರಚಿಸುವುದರ ಹಿನ್ನೆಲೆಯಲ್ಲಿ ಗುರುತಿಸಬಹುದು.

**ಲಿಂಗಣ್ಣಯ್ಯ**

ಕ್ರಿ.ಶ.1528ರ ಕಾಲದಲ್ಲಿ ಮಹಾರಾಜಾಧಿರಾಜ ರಾಜಪರಮೇಶ್ವರ ಬಿರುದಾಂಕಿತ ಶ್ರೀಕೃಷ್ಣದೇವರಾಯರು (ಕ್ರಿ.ಶ. 1509–1529) ವಿಜಯನಗರದ ಅರಸರಾಗಿದ್ದ ರಾಜರ ಸರ್ವ ಪ್ರಧಾನವಾಗಿದ್ದರೆ ಸಾಳುವ ಗೋವಿಂದರಾಜರು ಮರಡಿಪುರವನ್ನು ಅಗ್ರಹಾರವಾಗಿಸಲು ಧರ್ಮಾಧಿಕಾರಿಗಳು ತುಂಗಭದ್ರಾ ತೀರದಲ್ಲಿ ನೀಡಿದುದರ ಬಗ್ಗೆ ಹಾಗೂ ಶಾಸನ ಬರೆದ ಲಿಂಗಣ್ಣಯ್ಯ

ಕವಿಯ ಹೆಸರನ್ನು ಉಲ್ಲೇಖಿಸಲಾಗಿದೆ.[13] ಸಾಳುವ ಗೋವಿಂದರಾಜ ಕೃಷ್ಣದೇವರಾಯರ ಅತ್ಯಂತ ಆಪ್ತ ವಲಯದಲ್ಲಿ ನಿಷ್ಠಾವಂತ ಮಹಾಪ್ರಧಾನ ಎಂದು ತಿಳಿಯಬಹುದು.

**ಸರಸ್ವತಿ ಕಂಠಾಭರಣ**

ಕ್ರಿ.ಶ.13ನೇ ಶತಮಾನದ ತಲಕಾಡಿನ ಶಾಸನವನ್ನು ರಚಿಸಿದವರು ಸರಸ್ವತಿ ಕಂಠಾಭರಣನೆಂಬ ಕವಿಯೆಂದು ಶಾಸನೋಕ್ತವಾಗಿದೆ. ಎರಡನೇ ಬಲ್ಲಾಳನ ಆಸ್ಥಾನದಲ್ಲಿ ಸರಸ್ವತಿ ಕಂಠಾಭರಣ ಕವಿಯಾಗಿದ್ದುದಾಗಿ ತಿಳಿಯಬಹುದು."[14] ಹೊಯ್ಸಳರ ಎರಡನೆಯ ನರಸಿಂಹನನ್ನು ಸುತ್ತಿಸುವ ಸಲುವಾಗಿ ಮಾತ್ರ ಶಾಸನವನ್ನು ರಚಿಸಲಾಗಿದೆ.

**ಶ್ಲೋಕ :** ಗಿರಿಗಹ್ವರ ದೇಶೇಷು ಪೂರ್ವಂ ಶಾರ್ದೂಲಸಮ್ ಭವಃ ವಕ್ಷಸ್ಥಲೇಷು ಭೂಪಾನಾಞ್ಜತೇ ಬಲ್ಲಾಳರೂಪ ತೌ!! ಎಂದು ಬಲ್ಲಾಳನನ್ನು ಶಾಸನದಲ್ಲಿ ವರ್ಣಿಸಿದ್ದಾನೆ.

**ವೀರಣ್ಣ**

ಕ್ರಿಶ.1612ರ ಕಾಲಘಟ್ಟದ ಒಂದನೇ ರಾಜ ಒಡೆಯರ್ (ಕ್ರಿಶ.1578–1617)ರ ಕಾಲಘಟ್ಟಕ್ಕೆ ಸರಿಹೊಂದುತ್ತದೆ. ಪ್ರಸ್ತುತ ಶಾಸನವು ತಲಕಾಡಿನ ಮಹಮತಿಮಠದ ಸಿದ್ಧಪತಿಯ ಮಗ ಪಟ್ಟದ ಕಿರಿಯ ಮಲ್ಲಿಕಾರ್ಜುನದೇವರ ಕಾಲದಲ್ಲಿ ನಂಜನಗೂಡು ಜಾತ್ರೆಗೆ ಬಂದು 1000 ಜಂಗಮರಿಗೆ ದಿನಕ್ಕೆ ಎರಡು ಬಾರಿ ಭೋಜನವನ್ನು ಏರ್ಪಡಿಸಲು ಬಸವೇಶ್ವರರ ದೇವ ಮತ್ತು ರುದಸೆಟ್ಟರು ಒಪ್ಪಿಕೊಂಡುದರ ಬಗ್ಗೆ ಮಾಹಿತಿಯನ್ನು ವೀರಣ್ಣನವರು. ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.[15]

**ಶಾಸನಚಾರ್ಯ**

ಕ್ರಿಶ.1397ರ ತಿರುಮಕೂಡಲು ನರಸೀಪುರ ತಾಲೂಕಿನ ಹೆಮ್ಮಿಗೆ ಗ್ರಾಮದ ಶಾಸನ ನಾಗರಿ ಲಿಪಿಯ ತಾಮ್ರಶಾಸನ. ವಿಜಯನಗರದ ಅರಸರ ಸಂಸ್ಕೃತ ಭಾಷೆಯ ಎರಡನೇ ಹರಿಹರನ ವಂಶಾವಳಿಯನ್ನು ತಿಳಿಸಿದೆ.[16] ದೊರೆಯ ಆಳ್ವಿಕೆಯ ಕಾಲದಲ್ಲಿ ಹಿರಿ ಮಾಧವಪುರ ಅಲಾಳ ದೀಕ್ಷಿತನ ಮಗನಾದ ವರದಭಟ್ಟನಿಗೆ ದಾನವಾಗಿ ಹೆಮ್ಮಿಗೆ ಎಂಬ ಗ್ರಾಮವನ್ನು ಹರಿಹರ ರಾಜೇಂದ್ರಪುರವಾಗಿ ಪರಿವರ್ತಿಸಿ ನೀಡುವ ವಿವರಗಳನ್ನು ಶಾಸನವು ಒಳಗೊಂಡಿದೆ. ಈ ಶಾಸನದ ರಚನಾಕಾರ ಶಾಸನಚಾರ್ಯ. ವಿಜಯನಗರದ ಅರಸರ ಕಾಲದಲ್ಲಿ ಶಾಸನಚಾರ್ಯ ಎಂಬಂಥ ಹುದ್ದೆಗಳೇ ಇದ್ದುದನ್ನು ಶಾಸನವು ದಾಖಲಿಸುತ್ತದೆ. ಶಾಸನ ರಚನೆಯೇ ಇವರ ಪ್ರಧಾನ ಕರ್ತವ್ಯವಾಗಿದ್ದು ಹಾಕಿಸಿದ ಶಾಸನಗಳನ್ನು ರಕ್ಷಿಸುವುದು ಹಾಗೂ ನೀಡಿದ ದಾನಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದೂ ಇವರ

ಕರ್ತವ್ಯವಾಗಿದ್ದು. ಒಟ್ಟಾರೆಯಾಗಿ ಹೇಳಬೇಕೆಂದರೆ ವಂಶದ ಅರಸರ ಕಾಲದಲ್ಲಿದ್ದ 'ಸರ್ವರಹಾಸ್ಯಾಧಿಕೃತ' ಎಂಬ ಹುದ್ದೆಗೆ ಪರ್ಯಾಯವಾಗಿ ಶಾಸನಚಾರ್ಯ ಪದವಿ ಇತ್ತೆಂದು ಭಾವಿಸಬಹುದು. ಈತ ವಿಜಯನಗರದ ಇಮ್ಮಡಿ ಹರಿಹರನ ಆಸ್ಥಾನದಲ್ಲಿದ್ದನೆಂದು ಶಾಸನದಿಂದ ಗುರುತಿಸಬಹುದಾಗಿದೆ. ಶಾಸನಚಾರ್ಯ ಎಂಬಂಥ ಹೆಸರುಗಳನ್ನು ಗಮನಿಸಿದಾಗ ಅಂದು ಶಾಸನ ರಚನೆ ಮಾಡುವ ಸಂಬಂಧ ಸಿದ್ಧಹಸ್ತರಾದ ಪಂಡಿತ, ಎದ್ವಾಂಸರುಗಳಿಗೆ ರಾಜರ ಆಸ್ಥಾನಗಳಲ್ಲಿ ಉನ್ನತ ಅಧಿಕಾರ ಮತ್ತು ರಾಜಾಶ್ರಯದಂಥ ಮನ್ನಣೆಯು ದೊರಕುತ್ತಿದ್ದುದ್ದನ್ನು. ಶಾಸನಗಳೇ ಉಲ್ಲೇಖಿಸಿದೆ. ಹುದ್ದೆಯ ಹೆಸರಾಗಿರಬಹುದೆಂದು ತೋರುತ್ತದೆ.

**ಗ್ರಾಮಲೆಕ್ಕಿಗ**

ತಲಕಾಡಿನ ಒಂದು ಶಾಸನವು ಗ್ರಾಮಲೆಕ್ಕಿಗನಿಗೆ ಸಂಬಂಧಿಸಿದ ತಮಿಳು ಶಾಸನ ಗ್ರಾಮಲೆಕ್ಕಿಗನು ಪಂಚಾಂಗದ ವಿವರವನ್ನು ಬರೆದಿರುವ ವಿಷಯ ಉಲ್ಲೇಖವಾಗಿದೆ.[17]

**ಲಿಪಿಕಾರರು**

ಶಾಸನ ಕವಿಗಳು ರಚಿಸಿದ ಶಾಸನವನ್ನು ಕಂಡರಿಸಲು ಅನುಕೂಲವಾಗುವಂತೆ ಶಿಲೆಯ ಮೇಲೆ ಅಕ್ಷರಗಳನ್ನು ಮೂಡಿಸುತ್ತಿದ್ದವರು ಲಿಪಿಕಾರರಾಗಿದ್ದಾರೆ. ಮೈಸೂರು ಜಿಲ್ಲೆಯ ಶಾಸನದಲ್ಲಿ ಅಂತಹ ಲಿಪಿಕಾರರು ಬೆರಳೆಣಿಕೆಯಷ್ಟು ಕ್ರಿ.ಶ. 1504ರ ತಾಂಡ್ಯದ ಶಾಸನದಲ್ಲಿ ಸತ್ಯವಾಕ್ಯವನ್ನು ಗುರುತಿಸಬಹುದು. ತಿ. ನರಸೀಪುರದಲ್ಲಿ ತಿರುಮಲಾರ್ಯರು ಕ್ರಿ.ಶ.1663ರ ತಲಕಾಡಿನ ಶಾಸನದ ಲಿಪಿಕಾರರಾಗಿದ್ದಾರೆ.[18] ಇವರು ಅಳಸಿಂಗರಾರ್ಯರ ಮಗ. ಹೊಯ್ಸಳ ನಾಡಿನ ನಾಗಮಂಗಲದ ಸ್ಥಲದ ಹಳ್ಳಕೆರೆ ಎಂಬ ಹಳ್ಳಿ ಮತ್ತು ಬೀದಿಗಳನ್ನು ದೇವರಾಜಪುರ ಎಂದು ಹೆಸರು ಬದಲಿಸಿ "ವೆಂಕಟಾಚಾರ್ಯರಿಗೆ" ಉಡುಗೊರೆಯಾಗಿ ನೀಡಿರುವ ಮಾಹಿತಿ ದೊರೆಯುತ್ತದೆ. ಮೈಸೂರು ಅರಸರ ರಾಜಲಾಂಛನವು ಗಂಡಬೇರುಂಡ ಪಕ್ಷಿಯಾಗಿದ್ದು ಇವರ ರಾಜಮುದ್ರೆಯು ಧರಣಿ ವರಹ ಅಥವಾ ಭೂವರಹವಾಗಿತ್ತು ಎಂದು ಇವರ ಧ್ವಜ ಹನುಮದ್ ಗರುಡ ಆಗಿತ್ತೆಂದು (ಸಚ್ಚಿದಾನಂದ ಭೂವರಹ ಮುದ್ರೆಯು ಪ್ರವಿರಾಜತಂ) ಉಲ್ಲೇಖಗೊಂಡಿದೆ.

**ಕಂಡರಣೆಕಾರರು/ಶಿಲ್ಪಿಗಳು/ರೂವಾರಿಗಳು**ಶಾಸನ ಕವಿಗಳು ರಚಿಸಿದ ಶಾಸನವನ್ನು ಕಂಡರಿಸುತ್ತಿದ್ದ ಶಿಲ್ಪಿಗಳು ಅಥವಾ ಆಚಾರಿಗಳು ರೂವಾರಿಗಳು ಎಂದು ಕರೆಯಲಾಗುತ್ತದೆ. ಇಂತಹ ಕೆಲವು ಶಾಸನೋಕ್ತ ಕಂಡರಣೆಕಾರರನ್ನು ಮುಂದಿನಂತೆ ಗುರುತಿಸಲಾಗಿದೆ.

**ಕಂಬ**

ಕ್ರಿ.ಶ.1231ರ ತಿರುಮಕೂಡಲು ನರಸೀಪುರ ತಾಲ್ಲೂಕಿನ ಹಿರಿಯೂರು ಗ್ರಾಮದಲ್ಲಿನ ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಶಿಲಾಶಾಸನವನ್ನು ಕಂಡರಿಸಿದ ಶಿಲ್ಪಿ ವುಯಿಯೋಜನ ಮಗ ಕಂಬನೆಂದು ತಿಳಿದುಬರುತ್ತದೆ.[19]

**ನಾಗಿದೇವ**

ತಿರುಮಕೂಡಲು ನರಸಿಪುರ ತಾಲ್ಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ದೊರೆತ ಕ್ರಿ.ಶ.1357ರ ತಾಮ್ರ ಶಾಸನವು ವಿಜಯನಗರದ ಅರಸ ಎರಡನೇ ಹರಿಹರನ ಆಳ್ವಿಕೆಯ ಕಾಲವಾಗಿದ್ದು ಈ ಶಾಸನದ ಕಂಡರಣೆಕಾರ ನಾಗಿದೇವನಾಗಿದ್ದಾನೆ.[20] ಸೋಮನಾಥಪುರದ ಕೇಶವ ದೇವಾಲಯದಲ್ಲಿನ ಕ್ರಿ.ಶ.1268ರ ಮುಮ್ಮಡಿ ನರಸಿಂಹನ ಆಳ್ವಿಕೆಯ ಕಾಲದ ಶಾಸನಗಳಲ್ಲಿ ಕೇಶವ ದೇವಾಲಯವನ್ನು ಕೆತ್ತಿದ ಶಿಲ್ಪಿಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಮಲ್ಲಿ, ಮಲ್ಲಿತಂದು, ಮಸಣಿತಂಮ, ಬಲೆಯ, ಚೌಡೆಯ, ಚಾಮಯ, ನಭವ, ಭರ್ಮಯ, ನಂಜಯ, ಭರತ ಮತ್ತು ಎಳಮಸಯರಾಗಿದ್ದಾರೆ. ಇವರೆಲ್ಲರ ಪ್ರತಿಭೆಗೆ ಸಾಕ್ಷಿಯಾಗುವ ಸೋಮನಾಥಪುರದ ಕೇಶವ ದೇವಾಲಯ ಮೈಸೂರು ಪ್ರದೇಶದಲ್ಲಿ ಹೊಯ್ಸಳ ಶಿಲ್ಪಕಲೆಗೆ ಸಾಕ್ಷಿಯಾಗಿ ಇಂದಿಗೂ ಸುಪ್ರಸಿದ್ಧವಾಗಿದೆ.[21]

ಒಟ್ಟಾರೆಯಾಗಿ ತಿರುಮಕೂಡಲು ನರಸೀಪುರದಲ್ಲಿ ದೊರೆತ 320ಕ್ಕೂ ಹೆಚ್ಚು ಶಾಸನಗಳಲ್ಲಿ ಬೆರಳೆಣಿಕೆಯಷ್ಟು ಶಾಸನ ಕವಿಗಳು ನಾಗದೇವ, ವಚ್ಚಂಡೈ, ಕಂಬಕುಮಾರ, ಅಡೈಪಾರು, ಮಲ್ಲಪ್ಪ, ಸರಸ್ವತಿಕಂಠಾಭರಣ ಹಾಗೂ ಲಿಪಿಕಾರ ತಿರುಮಲಾರ್ಯ ಮತ್ತು ಕಂಬನೆಂಬ ಕಂಡರಣೆಕಾರರಿದ್ದರು. ವಿಜಯನಗರದ ಅರಸರ ಶಾಸನಗಳ ಶಾಸನ ಕವಿಗಳು ತ್ರಿಯಂಬಕ, ಸಭಾಪತಿ ರಾಯಸದ ಓಬಣ್ಣ, ಲಿಂಗಣ್ಣಯ್ಯ, ಶಾಸನಾಚಾರ್ಯ ಹಾಗೂ ಕಂಡರಣೆ ಕಾರ ನಾಗದೇವ. ಮೈಸೂರು ಒಡೆಯರ ಕಾಲದಲ್ಲಿ ವಿದ್ವಾನ್ ಕೃಷ್ಣದೀಕ್ಷಿತ ಮತ್ತು ವೀರಣ್ಣರು ಶಾಸನ ಕವಿಗಳು ತಮ್ಮ ಹೆಸರನ್ನು ಉಲ್ಲೇಖಿಸಿದ್ದಾರೆ. ಸುಮಾರು 250 ಕ್ಕೂ ಹೆಚ್ಚು ಅಧಿಕ ಶಾಸನಗಳಲ್ಲಿ ಶಾಸನ ಕವಿಗಳು, ಲಿಪಿಕಾರರು, ಕಂಡರಣೆಕಾರರು ಹೆಸರು ತಿಳಿದುಬರುವುದಿಲ್ಲ. ಇತಿಹಾಸದಲ್ಲಿ ಅವರು ಅಜ್ಞಾತರಾಗಿದ್ದಾರೆ.

**ಕೊನೆಟಿಪ್ಪಣಿಗಳು**

1. ಬಾ.ರಾ. ಗೋಪಾಲ (ಸಂ.):ಎಪಿಗ್ರಾಫಿಯ ಕರ್ನಾಟಕ,ಸಂಪುಟ–5,ತಿರುಮಕೂಡಲು ನರಸೀಪುರ, ಶಾಸನ ಸಂಖ್ಯೆ 16, ತಿರುಮಕೂಡಲು ನರಸೀಪುರ, ಪುಟ.349.
2. ಪೂರ್ವೋಕ್ತ : ತಿ.ನ 17, ತಿ.ನ. ಪುಟ 416.
3. ಪೂರ್ವೋಕ್ತ : ತಿ.ನ 40, ತುಂಬಲ, ಪುಟ 440.
4. ಪೂರ್ವೋಕ್ತ : ತಿ.ನ 41, ತುಂಬಲ, ಪುಟ 441.
5. ಪೂರ್ವೋಕ್ತ : ತಿ.ನ 46, ಬನ್ನೂರು, ಪುಟ 446.
6. ಪೂರ್ವೋಕ್ತ : ತಿ.ನ 86, ಬೆಟ್ಟಹಳ್ಳಿ, ಪುಟ 471.
7. ಪೂವೋಕ್ತ : ತಿ.ನ 105, ಸೋಸಲೆ, ಪುಟ 504.
8. ಪೂರ್ವೋಕ್ತ : ತಿ.ನ 107, ಸೋಸಲೆ, ಪುಟ 512.
9. ಪೂರ್ವೋಕ್ತ : ತಿ.ನ 110, ಸೋಸಲೆ, ಪುಟ 517.
10. ಪೂರ್ವೋಕ್ತ : ತಿ.ನ 111, ಸೋಸಲೆ, ಪುಟ 518.
11. ಪೂರ್ವೋಕ್ತ : ತಿ.ನ 115, ಸೋಸಲೆ, ಪುಟ 528.
12. ಪೂರ್ವೋಕ್ತ : ತಿ.ನ 126, ಹಿರಿಯೂರು, ಪುಟ 541.
13. ಪೂರ್ವೋಕ್ತ : ತಿ.ನ 132, ಮರಡೀಪುರ, ಪುಟ 545.
14. ಪೂರ್ವೋಕ್ತ : ತಿ.ನ 162, ತಲಕಾಡು, ಪುಟ 566.
15. ಪೂರ್ವೋಕ್ತ : ತಿ.ನ 201, ತಲಕಾಡು, ಪುಟ 588.
16. ಪೂರ್ವೋಕ್ತ : ತಿ.ನ 256, ಹೆಮ್ಮಿಗೆ, ಪುಟ 637.
17. ಪೂರ್ವೋಕ್ತ : ತಿ.ನ 209, ತಲಕಾಡು, ಪುಟ 591.
18. ಪೂರ್ವೋಕ್ತ : ತಿ.ನ. 218, ತಲಕಾಡು, ಪುಟ 595.
19. ಪೂರ್ವೋಕ್ತ : ತಿ.ನ 126, ಹಿರಿಯೂರು, ಪುಟ 541.
20. ಪೂರ್ವೋಕ್ತ : ತಿ.ನ. 256, ಹೆಮ್ಮಿಗೆ, ಪುಟ 634.
21. ಪೂರ್ವೋಕ್ತ : ತಿ.ನ 93, ಸೋಮನಾಥಪುರ, ಪುಟ 486.